**ಜಗದೀಶ:** ನಾಣಿ ಆ ರಸ್ತೆಯಲ್ಲಿ ಬಿದ್ದಿದ್ದ ಕುಡುಕನನ್ನು ಎಬ್ಬಿಸಲು ಪ್ರಯತ್ನಿಸಿದೆಯಂತಲ್ಲ ಸಫಲವಾಯಿತೆ?
**ನಾಣಿ:** ಇಲ್ಲ ಕಣೋ.
**ಜಗದೀಶ:** ಹಾಗಾದರೆ ಅವನನ್ನು ಅಲ್ಲಿಯೇ ಬಿಟ್ಟು ಬಂದೆಯಾ?
**ನಾಣಿ:** ಇಲ್ಲ, ಅವನನ್ನು ಎಬ್ಬಿಸುವುದಕ್ಕೆ ಇನ್ನೊಂದು ಬಾಟಲ್ ತಂದುಕೊಟ್ಟೆ.

***

**ಪತ್ನಿ:** ರೀ ನೀವೊಬ್ಬ ಬಹಳ ಪೆದ್ದ ಅಂತ ಗೊತ್ತಾಯ್ತು ಕಣ್ರೀ.
**ಪತಿ:** ನಿನಗೆ ಈಗ ಗೊತ್ತಾಯ್ತಾ? ನನಗೆ ಮದುವೆಯಾದ ವರ್ಷವೇ ಗೊತ್ತಾಗಿತ್ತು ಕಣೆ.

***

**ಶೀನ:** ಕಳೆದು ಹೋಗಿರುವ ನಿನ್ನ ನಾಯಿಮರಿ ತಂದುಕೊಟ್ಟವರಿಗೆ 5000 ರೂಪಾಯಿಗಳ ಬಹುಮಾನ ಕೊಡುತ್ತೇನೆಂದು ಜಾಹೀರಾತು ಕೊಟ್ಟಿರುವುದು ನಿಜವೇ?
**ಚಂದ್ರು:** ಹೌದು, ಜಾಹೀರಾತು ಕೊಟ್ಟಿದ್ದೇನೆ.
**ಶೀನ:** ಆ ಹಣಕ್ಕೆ ಇನ್ನೊಂದು ನಾಯಿಮರಿ ಬರುತ್ತಿತ್ತಲ್ಲ?
**ಚಂದ್ರು:** ಅದು ನನಗೂ ಗೊತ್ತು. ನನ್ನ ನಾಯಿಮರಿ ಅವರಿಗೆ ಸಿಕ್ಕಿದಾಗ ತಾನೇ ಈ ಮಾತು. ನನ್ನ ನಾಯಿಮರಿಯನ್ನು ಹೋದ ವಾರವೇ ನಮ್ಮ ಹಳ್ಳಿ ಮನೆಯಲ್ಲಿ ಬಿಟ್ಟು ಬಂದಿದ್ದೇನೆ.

***

**ರಮೇಶ:** ಪರಮೇಶಿ ಕಲಾಕೃತಿಯ ಪ್ರದರ್ಶನದಲ್ಲಿ ನಿನ್ನ ಕಲಾಕೃತಿ ಮುಂದೆ ಸುಮಾರು ಹೊತ್ತು ನಿಂತಿದ್ದೆ.
**ಪರಮೇಶಿ:** ಹೌದಾ, ನನ್ನ ಕಲಾಕೃತಿ ನಿನಗೆ ಅಷ್ಟೊಂದು ಇಷ್ಟವಾಯಿತಾ?
**ರಮೇಶ:** ಹಾಗೇನಿಲ್ಲ ಬೇರೆಯವರ ಕಲಾಕೃತಿಗಳ ಮುಂದೆ ಬಹಳಷ್ಟು ಜನ ನಿಂತಿದ್ದರು ಅದಕ್ಕೆ!

***


**ಬಾಸ್:** ಗಣೇಶ ನನ್ನ ಸ್ಥಾನದಲ್ಲಿ ನೀನಿದ್ದು, ನಿನ್ನ ಸ್ಥಾನದಲ್ಲಿ ನಾನಿದ್ದರೆ ಏನು ಮಾಡುತ್ತಿದ್ದೆ?
**ಗಣೇಶ:** ಮೊದಲು ನಿಮ್ಮನ್ನು ಕೆಲಸದಿಂದ ವಜಾ ಮಾಡಿ ಆ ಕೆಲಸಕ್ಕೆ ಬೇರೆಯವರನ್ನು ನೇಮಿಸಿಕೊಳ್ಳುತ್ತಿದ್ದೆ ಸರ್!


***

**ಹೊಸ ವೈದ್ಯ:** ಸರ್, ಮರೆವು ರೋಗ ಇರುವವರಿಗೆ ಮೊದಲು ಏನು ಮಾಡಬೇಕು?
**ವೈದ್ಯಾಧಿಕಾರಿ:** ಮೊದಲು ಅವರಿಂದ ಫೀಜ್ ವಸೂಲು ಮಾಡಿಕೊಳ್ಳಬೇಕು.

***

**ಬಾಸ್:** ನಿಮ್ಮ ವ್ಯಂಗ್ಯಚಿತ್ರಗಳ ಉದ್ಘಾಟನೆಗೆ ನನ್ನನ್ನೇ ಒತ್ತಾಯ ಮಾಡಲು ಕಾರಣ?
**ವ್ಯಂಗ್ಯಚಿತ್ರಕಾರ:** ಸರ್ ನಿಮ್ಮ ಕಂಪನಿಯಲ್ಲಿ ನಾನು ಕೆಲಸ ಮಾಡುವಾಗ ನಿಮ್ಮನ್ನು ನೋಡಿದಾಗಲೆಲ್ಲ ನನ್ನ ವ್ಯಂಗಚಿತ್ರಗಳಿಗೆ ಸ್ಫೂರ್ತಿ ಬರುತ್ತಿತ್ತು. ಅದಕ್ಕೆ ನಿಮ್ಮನ್ನು ಕರೆಸಿದೆ ಸರ್!




***

**ಗಿರಿ:** ಮಹೇಶ ನಾನು ನಳಿನಿಯನ್ನು ಮದುವೆಯಾಗಲು ಇಷ್ಟಪಟ್ಟಿದ್ದೇನೆ, ಆದರೆ ನನಗೆ ಸ್ವಂತ ಮನೆ ಇಲ್ಲ.
**ಮಹೇಶ:** ಮದುವೆಯಾದ ಮೇಲೆ ಅವರ ಮನೆಯಲ್ಲೇ ಇದ್ದು ಬಿಡು.
**ಗಿರಿ:** ಇರಬಹುದಿತ್ತು, ಆದರೆ ಅವರ ತಂದೆಯೇ ಅವರ ಮಾವನ ಮನೆಯಲ್ಲಿ ಇದ್ದಾರೆ.

***

**ಜ್ಯೋತಿಷಿ:** ನೋಡಿ ರವಿ, ನಿಮಗೆ ಇನ್ನೂ 20 ವರ್ಷಗಳು ಸಮಸ್ಯೆಗಳಿರುತ್ತವೆ.
**ರವಿ:** ಆಮೇಲೆ ಸಮಸ್ಯೆಗಳಿರುವುದಿಲ್ಲವೇ?
**ಜ್ಯೋತಿಷಿ:** ಹಾಗೇನಿಲ್ಲ, ನೀವು 20 ವರ್ಷಗಳು ಸಮಸ್ಯೆಗಳನ್ನು ನಿಭಾಯಿಸಿದ ಮೇಲೆ ಮುಂದೆಯೂ ಅದಕ್ಕೆ ಹೊಂದಿಕೊಂಡೇ ಬಾಳುತ್ತಾ ಹೋಗುತ್ತೀರಿ.

***

**ಪತ್ನಿ:** ರೀ ನಿಮಗೆ ಯಾವುದನ್ನೂ ಸರಿಯಾಗಿ ಆಯ್ಕೆ ಮಾಡಿಕೊಳ್ಳುವುದಕ್ಕೆ ಬರುವುದಿಲ್ಲ. ನೋಡಿ ಈ ಕೊಳಕು ತರಕಾರಿಗಳನ್ನು ತಂದಿದ್ದೀರಿ.
**ಪತಿ:** ಹೌದು ಕಣೆ, ಈ ವಿಷಯ ನಿನ್ನನ್ನು ಮದುವೆಯಾದ ಮೇಲೆ ಅರಿವಾಗಿತ್ತು.

***

**ಅರವಿಂದ:** ಅಶೋಕ ನೀನು ಆ ಚಿತ್ರನಟಿಯನ್ನು ಮದುವೆಯಾದ ಮೇಲೆ ಬರೀ ಪ್ರೇಮಕಥೆಗಳನ್ನು ಬರೆಯುತ್ತಿರುವೆಯಲ್ಲ. ಇದು ಹೇಗೆ ಸಾಧ್ಯವಾಯಿತು?
**ಅಶೋಕ:** ಆಕೆಯ ಅನೇಕ ಡೈರಿಗಳನ್ನು ಓದಿದ ಮೇಲೆ ಈ ಕಥೆಗಳನ್ನು ಬರೆಯುವುದಕ್ಕೆ ಸಾಧ್ಯವಾಯಿತು.

***

**ಅತ್ತೆ:** ಏನಮ್ಮಾ, ಎಂದೂ ಕೊಡದಿದ್ದ ಹಾಲನ್ನು ಇಂದು ಕೊಡುತ್ತಿದ್ದೀಯಾ?
**ಸೊಸೆ:** ಅತ್ತೆ ಇವತ್ತು ನಾಗರ ಪಂಚಮಿ, ಹೊರಗೆ ಹೋಗಿ ಹಾವಿಗೆ ಹಾಲೆರೆಯುವ ಬದಲಿಗೆ ನಿಮಗೆ ತಂದುಕೊಟ್ಟೆ ಅಷ್ಟೇ.

***

**ಪತಿ:** ಕಮಲ, ಹೊಸ ವರ್ಷ ಬರುತ್ತಾ ಇದೆ. ಇನ್ನು ಹಳೆಯದನ್ನು ಮರೆತು ಹೊಸ ವಿಷಯದತ್ತ ಗಮನಹರಿಸೋಣ.
**ಪತ್ನಿ:** ಅದೆಂದಿಗೂ ಸಾಧ್ಯವಿಲ್ಲ ಕಣ್ರೀ.
**ಪತಿ:** ಏಕೆ ಸಾಧ್ಯವಿಲ್ಲ?
**ಪತ್ನಿ:** ನೀವು ಸದಾ ನನ್ನ ಮುಂದಿರುವಾಗ ಹಳೆಯದನ್ನು ಹೇಗೆ ಮರೆಯುವುದಕ್ಕೆ ಆಗುತ್ತದೆ.

***

**ನ್ಯಾಯಾಧೀಶರು:** ಅಲ್ಲಯ್ಯಾ, ನೀನು ಏನು ತಪ್ಪು ಮಾಡಿರುವೆ?
**ಅಪರಾಧಿ:** ಚಿನ್ನದ ಅಂಗಡಿಯಲ್ಲಿ ಚಿನ್ನವನ್ನು ತೆಗೆದುಕೊಳ್ಳುತ್ತಿದ್ದೆ ಸರ್!
**ನ್ಯಾಯಾಧೀಶರು:** ಇಷ್ಟಕ್ಕೆ ನೀನು ಅಪರಾಧಿಯಾಗುವುದಕ್ಕೆ ಹೇಗೆ ಸಾಧ್ಯ?
**ಅಪರಾಧಿ:** ಚಿನ್ನ ತೆಗೆದುಕೊಳ್ಳುತ್ತಿದ್ದದ್ದೆಲ್ಲ ಮಧ್ಯರಾತ್ರಿಯಲ್ಲೇ ಸರ್!

***

**ಪತ್ನಿ:** ರೀ, ಇನ್ಮೇಲೆ ನಮ್ಮನೆಯಲ್ಲಿ ಮೂರು ಜನ ಆಗುತ್ತೇವೆ ಕಣ್ರೀ.
**ಪತಿ:** ಒಳ್ಳೆಯ ಸುದ್ದಿ ಕಣೆ, ದೇವರಿಗೆ ತುಪ್ಪದ ದೀಪ ಹಚ್ಚು.
**ಪತ್ನಿ:** ಅದಲ್ಲ ಕಣ್ರೀ ಇನ್ನೊಂದು ವಾರಕ್ಕೆ ನಮ್ಮ ಅಮ್ಮ ಇಲ್ಲಿಗೆ ಬರುತ್ತಾ ಇದ್ದಾರೆ.

ಸಂಗ್ರಹ: **ಶಂಕರೇಗೌಡ ತುಂಬಕೆರೆ, ಮಂಡ್ಯ**